ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಸಚಿವ ಸಂಪುಟ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 19/09/2019

# ಬೆಂಗಳೂರು ರಿಂಗ್ ರಸ್ತೆಗೆ ಅಸ್ತು

## 11,956 ಕೋಟಿ ವೆಚ್ಚದ ಕಾಮಗಾರಿ | ಎಲಿವೇಟೆಡ್ ರಿಂಗ್ ರಸ್ತೆ ಯೋಜನೆ ರದ್ದು

■ **ವಿಕ ಸುದ್ದಿಲೋಕ** ಬೆಂಗಳೂರು 19/9

ಮೈತ್ರಿ ಸರಕಾರದ ಎಲಿವೇಟೆಡ್ ರಿಂಗ್ ರೋಡ್ ಯೋಜನೆಯನ್ನು ಸ್ಥಗಿತಗೊಳಿಸಿರುವ ರಾಜ್ಯ ಸರಕಾರ 11, 956 ಕೋಟಿ ರೂ. ವೆಚ್ಚದಲ್ಲಿ ಬೆಂಗಳೂರು ನಗರದಲ್ಲಿ ಫೆರಿಫೆರಲ್ ರಿಂಗ್ ರೋಡ್ ನಿರ್ಮಿಸಲು ಮುಂದಾಗಿದ್ದು, ಸಂಪುಟ ಸಭೆಯಲ್ಲಿ ಇದಕ್ಕೆ ಒಪ್ಪಿಗೆ ನೀಡಲಾಗಿದೆ.

ಸಿಎಂ ಯಡಿಯೂರಪ್ಪ ನೇತೃತ್ವದಲ್ಲಿ ನಡೆದ ಸಂಪುಟ ಸಭೆಯಲ್ಲಿ ಈ ಮಹತ್ವದ ನಿರ್ಧಾರ ತೆಗೆದುಕೊಳ್ಳಲಾಗಿದೆ. ಜತೆಗೆ ಮುಖ್ಯಮಂತ್ರಿ ನವ ಬೆಂಗಳೂರು ಯೋಜನೆಯನ್ನು 'ಮುಖ್ಯಮಂತ್ರಿ ನವ ನಗರೋತ್ಥಾನ ' ಎಂಬ ಹೆಸರಿನೊಂದಿಗೆ ಪುನಃ ಆರಂಭಿಸುವುದಕ್ಕೂ ಒಪ್ಪಿಗೆ ನೀಡಲಾಗಿದೆ. ಸಂಪುಟ ಸಭೆ ಬಳಿಕ ಡಿಸಿಎಂ ಡಾ.ಸಿ.ಎನ್.ಅಶ್ವತ್ಥ ನಾರಾಯಣ ಹಾಗೂ ಸಂಸದೀಯ ವ್ಯವಹಾರ ಸಚಿವ ಜೆ.ಸಿ.ಮಾಧುಸ್ವಾಮಿ ಈ ವಿಷಯ ತಿಳಿಸಿದರು.

**ರಸ್ತೆ ಸ್ವರೂಪ:** ಸುಮಾರು 68. 5 ಕಿಮೀ ಉದ್ದ ಹಾಗೂ 100 ಮೀಟರ್ ಅಗಲದಲ್ಲಿ ಫೆರಿಫೆರಲ್ ರಿಂಗ್ ರೋಡ್ ನಿರ್ಮಾಣವಾಗಲಿದೆ. ಬಿಡಿಎ ಹಾಗೂ ಕೆಯುಐಡಿಎಫ್‌ಸಿ ಜತೆಗೆ ಯೋಜನೆ ಅನುಷ್ಠಾನಕ್ಕೆ ವಿಶೇಷ ವಾಹಕ ವ್ಯವಸ್ಥೆ ಸ್ಥಾಪಿಸಲಾಗುತ್ತದೆ. ಒಟ್ಟು ಮೂರು ವರ್ಷದ ಅವಧಿಯಲ್ಲಿ ಯೋಜನೆ ಮುಕ್ತಾಯಗೊಳಿಸಲು ನಿರ್ಧರಿಸಲಾಗಿದೆ. ಭೂ ಸ್ವಾಧೀನಕ್ಕೆ 8100 ಕೋಟಿ ರೂ., ರಸ್ತೆ ನಿರ್ಮಾಣಕ್ಕೆ 3850 ಕೋಟಿ ರೂ. ಸೇರಿ 11, 956 ಕೋಟಿ ರೂ. ಈ ಮಹತ್ವದ ಯೋಜನೆಗೆ ವೆಚ್ಚವಾಗುತ್ತದೆ. ಭೂ ಸ್ವಾಧೀನಕ್ಕೆ ರಾಜ್ಯ ಸರಕಾರ ಆರ್ಥಿಕ ನೆರವು ನೀಡಲಿದ್ದು, ಜೈಕಾದಿಂದ 3850 ಕೋಟಿ ರೂ. ಸಾಲ ಪಡೆದು ರಸ್ತೆ ನಿರ್ಮಿಸಲಾಗುತ್ತದೆ.

ತುಮಕೂರು ಹಾಗೂ ಹೊಸೂರು ರಸ್ತೆಯಿಂದ ಆರಂಭಗೊಂಡು ಮೈಸೂರು ರಸ್ತೆ ನೈಸ್ ಜಂಕ್ಷನ್‌ವರೆಗೆ ಸಂಪರ್ಕ ಕಲ್ಪಿಸಲಾಗುತ್ತದೆ. ಈ ಹಿಂದೆ ರಸ್ತೆಯ ಅಗಲ 75 ಮೀಟರ್ ಎಂದು ನಿರ್ಧರಿಸಲಾಗಿತ್ತು. ಆದರೆ ಹೊಸ ಕ್ರಿಯಾ ಯೋಜನೆ ಪ್ರಕಾರ 100 ಮೀಟರ್ ಅಗಲದ ರಸ್ತೆ ನಿರ್ಮಾಣವಾಗುತ್ತದೆ. ಇದರಲ್ಲಿ ಸರ್ವಿಸ್ ರೋಡ್ ಜತೆಗೆ ಪ್ರತ್ಯೇಕ ಸೈಕಲ್ ಟ್ರ್ಯಾಕ್ ಇರುತ್ತದೆ. 2 ಎಕರೆಯೊಳಗೆ ಹಾಗೂ 2 ಎಕರೆಗೆ ಮೇಲ್ಪಟ್ಟು ಎರಡು ಹಂತದಲ್ಲಿ ಭೂಸ್ವಾಧೀನ ಪರಿಹಾರ ನೀಡಲಾಗುತ್ತದೆ. 2 ಎಕರೆಯೊಳಗೆ ಭೂಮಿ ಕಳೆದುಕೊಳ್ಳುವವರಿಗೆ 2013ರ ಹೊಸ ಭೂಸ್ವಾಧೀನ ಕಾಯಿದೆ ಪ್ರಕಾರ ನಗದು ಪರಿಹಾರ ನೀಡಲಾಗುತ್ತದೆ. 2 ಎಕರೆ ಮೇಲ್ಪಟ್ಟವರಿಗೆ ಶೇ.50ರಷ್ಟು ನಗದು, ಶೇ.50ರಷ್ಟು ಟಿಡಿಆರ್ ರೂಪದಲ್ಲಿ ಪರಿಹಾರ ನೀಡಲಾಗುತ್ತದೆ. ಈ ರಸ್ತೆಗೆ ಟೋಲ್ ನಿಗದಿಪಡಿಸಲು ನಿರ್ಧರಿಸಲಾಗಿದ್ದು, ಒಂದು ವರ್ಷದೊಳಗಾಗಿ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಲಾಗುತ್ತದೆ. 3 ವರ್ಷದೊಳಗಾಗಿ ರಸ್ತೆ ನಿರ್ಮಾಣ ಕಾರ್ಯ ಮುಕ್ತಾಯಗೊಳ್ಳುತ್ತದೆ.

**ನವನಗರೋತ್ಥಾನ:** ಮೈತ್ರಿ ಸರಕಾರದ ಅವಧಿಯಲ್ಲಿ ಜಾರಿಗೆ ತಂದಿದ್ದ ಮುಖ್ಯಮಂತ್ರಿಗಳ ವಸತಿ ಯೋಜನೆಗೆ ಬಿಜೆಪಿ ಸರಕಾರ ಅಧಿಕಾರಕ್ಕೆ ಬಂದ ಆರಂಭದಲ್ಲಿ ತಡೆ ನೀಡಲಾಗಿತ್ತು. ಆದರೆ ಈಗ ಮುಖ್ಯಮಂತ್ರಿ ನವನಗರೋತ್ಥಾನ ಎಂಬ ಹೆಸರಿನಲ್ಲಿ ಯೋಜನೆಯನ್ನು ಪುನಾರಂಭಗೊಳಿಸಲು ಸಂಪುಟ ಸಭೆಯಲ್ಲಿ ಒಪ್ಪಿಗೆ ನೀಡಲಾಗಿದೆ. 8015 ಕೋಟಿ ರೂ. ವೆಚ್ಚದಲ್ಲಿ ಹೊಸದಾಗಿ ಕ್ರಿಯಾ ಯೋಜನೆ ರೂಪಿಸಲಾಗುತ್ತದೆ. ಇದರ ಜತೆಗೆ ಸಿಎಂ ಯಡಿಯೂರಪ್ಪ ಬೆಂಗಳೂರು ರೌಂಡ್ಸ್ ಸಂದರ್ಭದಲ್ಲಿ ಒಪ್ಪಿಗೆ ನೀಡಿದ್ದ 15 ಹೊಸ ರಸ್ತೆ ಕಾಮಗಾರಿಗಳು, ಕಡಿಮೆ ಖರ್ಚಿನಲ್ಲಿ ಪ್ರಾಯೋಗಿಕವಾಗಿ ನಿರ್ಮಿಸಲು ಉದ್ದೇಶಿಸಿರುವ ವೈಟ್ ಟ್ಯಾಪಿಂಗ್ ರಸ್ತೆ ಸೇರಿ 328 ಕೋಟಿ ರೂ. ಮೊತ್ತದ ಕಾಮಗಾರಿಗಳನ್ನು ಇದರ ವ್ಯಾಪ್ತಿಗೆ ಸೇರಿಸಲಾಗಿದೆ.

ನಗರ ಪ್ರದೇಶದಲ್ಲಿ ಈಗಾಗಲೇ ಟೆಂಡರ್ ಕರೆದು ಕಾರ್ಯಾದೇಶ ನೀಡಿದ ವೈಟ್ ಟ್ಯಾಪಿಂಗ್ ಯೋಜನೆ ಮುಂದುವರಿಯುತ್ತದೆ. ಹೊಸ ಕಾಮಗಾರಿಗಳಿಗೆ ಇನ್ನು ಮುಂದೆ ಅನುಮತಿ ನೀಡುವುದಿಲ್ಲ ಎಂದು ಅಶ್ವತ್ಥನಾರಾಯಣ ಸ್ಪಷ್ಟಪಡಿಸಿದರು.





ಬೆಳಗಾವಿಯಲ್ಲಿ ಅಧಿವೇಶನ ನಡೆಸಲು ನಮಗೇನು ಭಯವಿಲ್ಲ. ಆದರೆ ನೆರೆ ಹಿನ್ನೆಲೆಯಲ್ಲಿ ಮಾಡುತ್ತಿಲ್ಲ. ಎಲ್ಲೇ ಅಧಿವೇಶನ ನಡೆಸಿದರೂ ಭಾಗವಹಿಸುವ ಶಾಸಕರು ಬದಲಾಗುವುದಿಲ್ಲ. ಬೆಳಗಾವಿಯಲ್ಲಿ ಅಧಿವೇಶನ ನಡೆಸಿದರೆ ಸಿದ್ದರಾಮಯ್ಯನವರೇನು ಅಲ್ಲಿಯ ಜನರನ್ನೆಲ್ಲ ಕರೆತರುತ್ತಾರೆಯೇ ?

**-ಜೆ.ಸಿ.ಮಾಧುಸ್ವಾಮಿ**
ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವ.

### ಹೊಸ ಬಜೆಟ್ ಇಲ್ಲ

**ಅಕ್ಟೋಬರ್ 14ರಿಂದ 26ರ ವರೆಗೆ ಬೆಂಗಳೂರಿನಲ್ಲಿ ವಿಧಾನ ಮಂಡಲದ ಅಧಿವೇಶನ ಕರೆಯಲು ನಿರ್ಧರಿಸಲಾಗಿದ್ದು, ಸಿಎಂ ಯಡಿಯೂರಪ್ಪ ಪೂರಕ ಬಜೆಟ್ ಮಂಡನೆ ಮಾಡಲಿದ್ದಾರೆ. ಬೆಳಗಾವಿ ಜಿಲ್ಲೆ ನೆರೆಯಿಂದ ತೀವ್ರ ಹಾನಿಗೊಂಡಿದೆ. ಹೀಗಾಗಿ ಪರಿಹಾರ ಕಾರ್ಯಾಚರಣೆಗೆ ಅಡಚಣೆ ಉಂಟು ಮಾಡದೇ ಇರುವ ಉದ್ದೇಶದಿಂದ ಬೆಂಗಳೂರಿನಲ್ಲಿ ಅಧಿವೇಶನ ಕರೆಯಲಾಗುತ್ತದೆ. ಹೊಸ ಬಜೆಟ್ ಬದಲು ಪೂರಕ ಬಜೆಟ್‌ಗೆ ಸದನದ ಒಪ್ಪಿಗೆ ಪಡೆಯಲು ಸಿಎಂ ಯಡಿಯೂರಪ್ಪ ನಿರ್ಧರಿಸಿದ್ದಾರೆ.**

### ಸಂಪುಟದ ನಿರ್ಣಯಗಳು

- **ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸೇವಾ ನಿಯಮಕ್ಕೆ ಒಪ್ಪಿಗೆ.**
- **ಅಗ್ನಿಶಾಮಕ ಹಾಗೂ ತುರ್ತುಸೇವೆ, ಕಾರಾಗೃಹ ಸಿಬ್ಬಂದಿಗೆ 6ನೇ ವೇತನ ಆಯೋಗದ ಪ್ರಕಾರ ವೇತನ ಪರಿಷ್ಕರಣೆ.**
- **ಮಾನವ ಹಕ್ಕು ಆಯೋಗದ ಮೂರು ಸದಸ್ಯರು ಒಟ್ಟಾಗಿಯೇ ಅರ್ಜಿ ಹಾಗೂ ದೂರು ವಿಚಾರಣೆ ಮಾಡಲು ವ್ಯವಸ್ಥೆ.**
- **ಸ್ತನ ಹಾಗೂ ಗರ್ಭಕೋಶ ಕ್ಯಾನ್ಸರ್ ಪತ್ತೆಗೆ ಮಂಗಳೂರು, ತುಮಕೂರು, ವಿಜಯಪುರ, ಚಿತ್ರದುರ್ಗ, ದಾವಣಗೆರೆ, ಬಾಗಲಕೋಟೆ, ಚಿಕ್ಕಮಗಳೂರು, ಹಾವೇರಿ, ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲಾ ಸರಕಾರಿ ಆಸ್ಪತ್ರೆಯಲ್ಲಿ ಸುಧಾರಿತ ಸ್ಕ್ಯಾನಿಂಗ್ ಕೇಂದ್ರ ಸ್ಥಾಪನೆ.**
- **ತಡೆ ಹಿಡಿದಿದ್ದ ಲೋಕೋಪಯೋಗಿ ಇಲಾಖೆಯ ಅಪೆಂಡಿಕ್ಸ್- ಇ ಕಾಮಗಾರಿಗಳನ್ನು ಮುಂದುವರಿಸುವುದಕ್ಕೆ ಸಚಿವ ಸಂಪುಟ ಒಪ್ಪಿಗೆ**
- **ಬೆಳಗಾವಿ ಜಿಲ್ಲೆ ಹಿಂಗರಗಿ ಹೋಬಳಿಯಲ್ಲಿ 143.53 ಕೋಟಿ ರೂ. ವೆಚ್ಚದಲ್ಲಿ ಬಹುಗ್ರಾಮ ಕುಡಿಯುವ ನೀರು ಯೋಜನೆ**
- **ಕಲಬುರ್ಗಿ ಜಿಲ್ಲೆ ಅಫ್ಜಲಪುರದಲ್ಲಿ ಮಿನಿ ವಿಧಾನಸೌಧ ನಿರ್ಮಿಸಲು ಜಲಸಂಪನ್ಮೂಲ ಇಲಾಖೆ 4 ಎಕರೆ ಜಾಗ**
- **ಅಗರ ಎಸ್‌ಟಿಪಿಯಿಂದ 35 ಎಂಎಲ್‌ಡಿ ನೀರನ್ನು ಹೆಚ್ಚುವರಿಯಾಗಿ ಶುದ್ಧಿಕರಿಸಿ ಕೆಸಿ ವ್ಯಾಲಿಗೆ ಪೂರೈಕೆ ಮಾಡಲು 30 ಕೋಟಿ ರೂ.**
- **19 ಜಿಲ್ಲೆಗಳಲ್ಲಿ ಮಾತ್ರ ಅಸ್ತಿತ್ವದಲ್ಲಿದ್ದ ಕೇಂದ್ರ ಪ್ರಾಯೋಜಿತ ರೋಷನ್ ಅಭಿಯಾನ ಎಲ್ಲ ಜಿಲ್ಲೆಗೆ ವಿಸ್ತರಣೆ.**
- **ಸಚಿವಾಲಯದ ನಾನಾ ಇಲಾಖೆಗಳ ಹಾರ್ಡ್‌ವೇರ್, ಸಾಫ್ಟ್‌ವೇರ್ ನಿರ್ವಹಣೆಗೆ ಏಜೆನ್ಸಿ ನಿಗದಿ.**
- **ಕಲಬುರ್ಗಿಯಲ್ಲಿ 300 ಹಾಸಿಗೆಯ ಜಯದೇವ ಆಸ್ಪತ್ರೆ ಶಾಖೆ ನಿರ್ಮಾಣ. ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಯಿಂದ 150 ಕೋಟಿ ರೂ. ವಿನಿಯೋಗ.**
- **ಇನ್ಫೋಸಿಸ್ ವಿಶೇಷ ಆರ್ಥಿಕ ವಲಯದ 10 ಎಕರೆ ಗೋಮಾಳ ಹಾಗೂ 9.37 ಎಕರೆ ಸರಕಾರಿ ಕುಂಟೆ ಜಾಗದ ಅದಲು-ಬದಲಿಗೆ ಒಪ್ಪಿಗೆ.**
- **ರೋರಿಚ್ ಎಸ್ಟೇಟ್‌ನ 468.33 ಎಕರೆ ಜಾಗ ಅಳತೆ ಮಾಡಿ ಒತ್ತುವರಿ ತೆರವಿಗೆ ನಿರ್ಧಾರ.**
- **ಬಳ್ಳಾರಿ ಜಿಲ್ಲೆ ಸಂಡೂರಿನಲ್ಲಿ 37 ಕೋಟಿ ರೂ. ವೆಚ್ಚದಲ್ಲಿ 21 ಬಹುಗ್ರಾಮ ಯೋಜನೆ**
- **ಬಯಲುಸೀಮೆ ಅಭಿವೃದ್ಧಿ ಮಂಡಳಿ ವ್ಯಾಪ್ತಿಯ ಪ್ರತಿ ವಿಧಾನ ಸಭೆ ಕ್ಷೇತ್ರಕ್ಕೆ 1 ಕೋಟಿ ರೂ. ನೀಡಲು ಒಪ್ಪಿಗೆ.**